

# ಚಿನ್ನದ ಕ್ರಿಸ್ಮಸ್ ಟ್ರೀ

ಮತ್ತೆ ಕ್ರಿಸ್ಮಸ್ ಹಬ್ಬ ಬಂದಿದೆ. ಈ ಸಲ ಅಪ್ಪಟ ಬಂಗಾರದಿಂದಲೇ ಮಾಡಿರುವ ರಿಬ್ಬನ್, ಆರ್ಕಿಡ್, ಹೂವು ಎಲೆಗಳಿಂದ ಅಂದವಾಗಿ ಅಲಂಕೃತಗೊಂಡ 'ಚಿನ್ನದ ಕ್ರಿಸ್ಮಸ್ ಟ್ರೀ'ಯೊಂದನ್ನು ಜಪಾನ್‌ನ ಟೋಕಿಯೊದ ಆಭರಣದ ಅಂಗಡಿಯೊಂದರಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ.

ಬರೋಬ್ಬರಿ ಎಂಟು ಅಡಿ ಎತ್ತರವಿರುವ ಇದನ್ನು ತಯಾರಿಸಲು 12 ಕೆ.ಜಿ.ಯಷ್ಟು ಬಂಗಾರವನ್ನು ಬಳಸಲಾಗಿದೆ. ಹೂವುಗಳನ್ನು ಅಂದವಾಗಿ ಜೋಡಿಸುವ ಕಲೆಯನ್ನು ಕರಗತ ಮಾಡಿಕೊಂಡಿರುವ ಶೊಗೊ ಕಾರಿಯಾಜಾಕಿ ಎಂಬಾಕೆ ಇದನ್ನು ವಿನ್ಯಾಸ ಮಾಡಿದ್ದಾಳೆ. 15 ಜನ ನುರಿತ ಕುಶಲಕರ್ಮಿಗಳು ಸೇರಿ ನಾಲ್ಕೂವರೆ ತಿಂಗಳ ಕಾಲ ದುಡಿದು ಇದನ್ನು ಸಿದ್ಧಗೊಳಿಸಿದ್ದಾರೆ.

ಇದರಲ್ಲಿ ಬಳಸಿದ ಬಂಗಾರದ ಬೆಲೆಗಿಂತ ಹೆಚ್ಚು ಕೂಲಿಯನ್ನು ಇದನ್ನು ತಯಾರಿಸಿದ ಕುಶಲಕರ್ಮಿಗಳಿಗೆ ನೀಡಲಾಗಿದೆ ಎನ್ನುವುದೇ ಅಚ್ಚರಿಯ ವಿಷಯ! ಕ್ರಿಸ್ಮಸ್ ತಿಂಗಳ ಪೂರ್ತಿ ಪ್ರದರ್ಶನಗೊಳ್ಳಲಿರುವ ಈ ಕ್ರಿಸ್ಮಸ್ ಟ್ರೀ ಮಾರಾಟಕ್ಕಿಲ್ಲ. 'ವರ್ಲ್ಡ್ ರೆಕಾರ್ಡ್ ಅಕಾಡೆಮಿ'ಯ ಪ್ರಕಾರ, ಈ ಗೋಲ್ಡನ್ ಟ್ರೀ ಪ್ರಪಂಚದಲ್ಲೇ ಅತ್ಯಂತ ಬೆಲೆ ಬಾಳುವ ಮರ ಎಂದು ದಾಖಲೆ ಸ್ಥಾಪಿಸಿದೆ. ಬೆಲೆಯೆ? ಹೆಚ್ಚೇನಿಲ್ಲ ಬಿಡಿ– ಸುಮಾರು 10,49,72,161 ರೂಪಾಯಿ! (ಹತ್ತೂವರೆ ಕೋಟಿಗೆ ಸ್ವಲ್ಪ ಕಡಿಮೆ!)

■ ವಿದ್ಯಾ ವಿ ಹಾಲಭಾವಿ